**ಓ.ಎಸ್. ನಂಬರ್ :** 60/2022

ಪಿ.ಡಬ್ಲ್ಯೂ : 3

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳ ನ್ಯಾಯಾಲಯ, ಸೋಮವಾರಪೇಟೆ.**

**ಓ.ಎಸ್. ನಂಬರ್ : 60/2022**

ಪಿ.ಡಬ್ಲ್ಯೂ : 3

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

ದಿನಾಂಕ :11.09.2023

| | | |
|---|---|---|
| ಹೆಸರು | : | ಜೊಯಪ್ಪ |
| ತಂದೆಯ ಹೆಸರು | : | ತಿಮ್ಮಯ್ಯ |

**ಮುಖ್ಯವಿಚಾರಣೆ: ಶ್ರೀ ಡಿ.ಎಲ್ ವಕೀಲರಿಂದ : ವಾದಿಯ ಪರವಾಗಿ**

ನಾನು ವಾದಿ ಪರ ಸಾಕ್ಷಿ ಇದ್ದು ನನ್ನ ಮುಖ್ಯ ವಿಚಾರಣೆ ಸಾಕ್ಷ್ಯವಾಗಿ ಶಪಥ ಪತ್ರವನ್ನು ಹಾಜರುಪಡಿಸಿರುತ್ತೇನೆ. ಶಪಥ ಪತ್ರದಲ್ಲಿ ಬರೆಸಿರುವುದನ್ನು ನಾನು ಹೇಳಿ ಬರೆಯಿಸಿದ್ದು ನಂತರ ಅದನ್ನು ಓದಿ ಸಹಿ ಮಾಡಿರುತ್ತೇನೆ. ಶಪಥ ಪತ್ರದಲ್ಲಿ ಬರೆದಿರುವುದು ಎಲ್ಲಾ ಸತ್ಯವಾಗಿರುತ್ತದೆ.

ಸಾಕ್ಷಿ ನಿಪಿ 2 ರ ವಿಲ್ಲು ನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 2 ಎಂದು ಗುರುತಿಸಲಾಗಿದ್ದು, ಅದನ್ನು ನನ್ನ ಪತ್ನಿಯ ತಂದೆ ಮಲ್ಲಪ್ಪ ರವರು ಬರೆದಿರುತ್ತಾರೆ ಎಂದು ಗುರುತಿಸಿದ್ದು ಅವರ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವರ ಸಹಿಯನ್ನು ಈಗಾಗಲೇ ನಿಪಿ 2ಎ ಎಂದು, ಸಾಕ್ಷಿ ತನ್ನ ಸಹಿಯನ್ನು ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 2ಸಿ ಎಂದು ಗುರುತಿಸಲಾಗಿರುತ್ತದೆ, ತನ್ನ ಜೊತೆ ಸದರಿ ವಿಲ್ಲು ನಾಮೆಗೆ ಗೋಪಾಲಕೃಷ್ಣ ರವರು ಸಹಿ ಮಾಡಿದ್ದು ಅವರ ಸಹಿಯನ್ನು

ಈಗಾಗಲೇ ನಿಪಿ 2 ಸಿ ಎಂದು, ಸದರಿ ವಿಲ್ಲು ನಾಮೆಯನ್ನು ತಯಾರಿಸಿದ ಡಿ.ಎಂ.ಪೂವಯ್ಯ ರವರ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 2 ಡಿ ಎಂದು ಗುರುತಿಸಲಾಗಿದೆ.

**ಪಾಟೀ ಸವಾಲು : 2 ನೇ ಪ್ರತಿವಾದಿ ಪರವಾಗಿ ಶ್ರೀ ಡಿ.ಕೆ.ಟಿ ವಕೀಲರಿಂದ ಪ್ರತಿವಾದ ಪತ್ರ ಸಲ್ಲಿಸಿರುವುದಿಲ್ಲ ಆದ್ದರಿಂದ ಪಾಟಿ ಸವಾಲು ಇಲ್ಲ ಎಂದು ತೆಗೆದುಕೊಳಳಲಾಯಿತು.**

**ಪಾಟೀ ಸವಾಲು : ಪ್ರತಿವಾದಿ 1 ಮತ್ತು 3 ರವರ ಪರವಾಗಿ ಶ್ರೀ ಪಿ.ಕೆ.ಜಿ ವಕೀಲರಿಂದ ಕೋರಿಕೆಯ ಮೇರೆಗೆ ಕಾಯ್ದಿರಿಸಲಾಯಿತು.**

ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ
ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು.

ಓ.ಹೇ.ಕೇ.ಸರಿ ಇದೆ

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳು,
ಸೋಮವಾರಪೇಟೆ.